ಸಾಕ್ಷಿದಾರರಿಗೆ ದಿನಾಂಕಃ 09.02.2016 ರಂದು ಕರೆಯಿಸಿ ಪ್ರಮಾಣ ವಚನ ಕೊಡಿಸಲಾಯಿತು.

ಪಾಟೀಸವಾಲು ಪ್ರತಿವಾದಿಯಪರ ವಕೀಲರಿಂದಃ-

ನಿಮ್ಮ ಮಗಳಿಗೆ 6 ಲಕ್ಷದಾ 50 ಸಾವಿರ ರೂಪಾಯಿ ಹಣ ಹೇಗೆ ಬಂದಿತು ಎನ್ನಲಾಗಿ ಪಬ್ಲಿಕ್ ಪ್ರಾವಿಡಂಟ್‌ಪಂಡ್ ಹಣ ಅವರಿಗೆ ಬಂದಿತ್ತು ಎನ್ನುವರು. ವಾದಿಯ ಬ್ಯಾಂಕ್ ಖಾತೆಗೆ 6 ಲಕ್ಷದಾ 50 ಸಾವಿರ ರೂಪಾಯಿ ನಗದು ಹಣ ಜಮಾ ಆಗಿದೆ ಎನ್ನುವುದು ಸುಳ್ಳು. ಪ್ರತಿವಾದಿಯು ನಿಮ್ಮ ಮಗಳಿಗೆ ಪ್ರೀತಿಯಿಂದ ಕೊಟ್ಟಂತಹ 6 ಲಕ್ಷದಾ 50 ಸಾವಿರ ರೂಪಾಯಿ ಹಣವನ್ನು ನೀವು ನಿಮ್ಮ ಮಗಳ ಹೆಸರಿನಲ್ಲಿ ಪಬ್ಲಿಕ್ ಪ್ರಾವಿಡಂಟ್‌ಪಂಡ್‌ಗೆ ಜಮಾ ಮಾಡಿದ್ದಿರಿ ಎನ್ನಲಾಗಿ ಅದು ಸುಳ್ಳು ಎನ್ನುವರು. ಬ್ಯಾಂಕಿಗೆ ನಾನು ಲಿಖಿತ ಅರ್ಜಿಯನ್ನು ಕೊಟ್ಟು ಬ್ಯಾಂಕಿನಿಂದ ಅದಕ್ಕೆ ಉತ್ತರವನ್ನು ಪಡೆದಿದ್ದೇನೆ. ಪ್ರತಿವಾದಿಗೆ ನೀವು ಕೊಟ್ಟಿದ್ದೀರಿ ಎಂದು ಹೇಳುವ 6 ಲಕ್ಷದಾ 50 ಸಾವಿರ ರೂಪಾಯಿ ಹಣ ಪ್ರತಿವಾದಿಯ ಹಣ ಎನ್ನಲಾಗಿ ಅದು ಸುಳ್ಳು ಎನ್ನುವರು. ನೀವು, ನಿಮ್ಮ ಪತ್ನಿ ಹಾಗೂ ನಿಮ್ಮ ಮಗಳು ಕಾಲಾನುಕ್ರಮವಾಗಿ ಪ್ರತಿವಾಯಿಂದ ಹಣವನ್ನು ಪಡೆದು ಆ ಬಗ್ಗೆ ಪ್ರತಿವಾದಿಗೆ ಒಪ್ಪಿಗೆ ಪತ್ರವನ್ನು ಬರೆದುಕೊಟ್ಟಿದ್ದೀರಿ ಎನ್ನಲಾಗಿ ಅದು ಸುಳ್ಳು ಎನ್ನುವರು. ಪ್ರತಿವಾಯಿಂದ ನಾವು 40 ಲಕ್ಷ ರೂಪಾಯಿ ಹಣವನ್ನು ಪಡೆದು ಅವರಿಗೆ ಒಪ್ಪಿಗೆ ಪತ್ರವನ್ನು ಬರೆದುಕೊಟ್ಟಿದ್ದೇವೆ ಎನ್ನುವುದು ಸುಳ್ಳು. 2009ನೇ ಸಾಲಿನಲ್ಲಿ ನಾವು ಸಾಕ್ಷಿದಾರರ ಸಮಕ್ಷಮ ನಮ್ಮ ಅತ್ತೆಗೆ ಒಪ್ಪಿಗೆ ಪತ್ರವನ್ನು ಬರೆದುಕೊಟ್ಟಿದ್ದೇವೆ ಎನ್ನುವುದು ಸುಳ್ಳು. ಪ್ರತಿವಾದಿಯ ಹಣವನ್ನು ನೀವು, ನಿಮ್ಮ ಪತ್ನಿ ಹಾಗೂ ನಿಮ್ಮ ಮಗಳು ಪಡೆದುಕೊಂಡು ಅದೇ ಹಣವನ್ನು ಗೃಹ ಪೈನಾನ್ಸ್‌ಗೆ ಜಮಾ ಮಾಡಿದ್ದೀರಿ ಎನ್ನಲಾಗಿ ಅದು ಸುಳ್ಳು ಎನ್ನುವರು. ನಾವು ಪ್ರತಿವಾದಿಯ ಹಿರಿಯ ಮಗ ಶ್ರೀ ರಾಜೇಶ ಜಡಿಯವರೊಂದಿಗೆ ಷರೀಕಾಗಿ ಸುಳ್ಳು ಪ್ರಾಮಿಸರಿ ನೋಟುಗಳನ್ನು ಸೃಷ್ಟಿಸಿದ್ದೇವೆ ಎನ್ನುವುದು ಸುಳ್ಳು. ಪ್ರತಿವಾದಿಯ ಆಸ್ತಿಯನ್ನು ಕಬಳಿಸಬೇಕೆಂಬ ಹೊಂಚನ್ನು ನಾವು ಹಾಕಿದ್ದೇವೆ ಎನ್ನುವುದು ಸುಳ್ಳು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ)**

**ಓ ಹೆ ಕೆ ಸರಿ ಅದೆ,** **ನನ್ನ ಸಮಕ್ಷಮ,**

2ನೇ **ಹೆಚ್ಚುವರಿ ಹಿ. ದಿ. ನ್ಯಾಯಾಧೀಶರು, ಹುಬ್ಬಳ್ಳಿ.**